**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**
**ಹಾಗೂ ಎಫ್.ಟಿ.ಎಸ್.ಸಿ-1, ಹಾವೇರಿ**
**ಎಸ್.ಸಿ.18/2020**

PW- 01

CW-02

| | |
|---|---|
| ಸಾಕ್ಷಿದಾರರ ಹೆಸರುಃ | ನೀಲವ್ವ ಕಾಲವಾಡ್ |
| ಗಂಡನ ಹೆಸರುಃ | ನೀಲಪ್ಪ |
| ವಯಸ್ಸುಃ | 60 ವರ್ಷ |
| ಉದ್ಯೋಗಃ | ಮನೆಕೆಲಸ |
| ಹಾಲಿ ವಾಸ ಸ್ಥಳಃ | ವಿಶ್ವೇಶ್ವರ ನಗರ, ಶಿಗ್ಗಾಂವ |

**ದಿನಾಂಕ: 02.03.2024 ರಂದು ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-3 ಗೊತ್ತಿಲ್ಲ. ಪೋಲಿಸರು ನನ್ನನ್ನು ಕರೆಸಿಲ್ಲ, ಆದರೆ ನಮ್ಮ ನೆರೆಹೊರೆಯ ಒಬ್ಬಳು ಅಜ್ಜಿ ಕೊಲೆಯಾಗಿ ತೀರಿಕೊಂಡ ವಿಷಯ ಗೊತ್ತಾಗಿ ಸದರಿಯವಳ ಮನೆಗೆ ನಾನು ಈಗ್ಗೆ 5 ವರ್ಷಗಳ ಹಿಂದೆ ಹೋಗಿದ್ದೆ. ಅಲ್ಲಿ ಪೋಲಿಸರು ಬಂದಿದ್ದರು. ನಾನು ಮೃತ ಅಜ್ಜಿಯನ್ನು ಅವಳು ಉಟ್ಟಿದ್ದ ಸೀರೆಯಿಂದ ಅವಳ ಕಣ್ಣು ಮತ್ತು ಕೈಗಳನ್ನು ಕಟ್ಟಿದ್ದರು. ಮೃತ ಅಜ್ಜಿಯ ಎಡ ಕಪಾಳದ ಮೇಲೆ ಬೆರಳುಗಳು ಚೂರಿದ ಗಾಯಗಳಾಗಿದ್ದು, ಬಲಕಪಾಳದ ಮೇಲೆ ಬಾಯಿಯಿಂದ ರಕ್ತ ಸೋರುತ್ತಿತ್ತು ಮತ್ತು ಸದರಿ ಬಲಕಪಾಳದ ಒಂದು ಬೆರಳಿನಿಂದ ಚೂರಿದ ಗಾಯವಾಗಿತ್ತು. ಮೃತ ಅಜ್ಜಿಯ ಕೈಗಳಿಗೆ ಬಳೆ ಚುಚ್ಚಿದ ಒಂದು ಕಡೆ ಗಾಯವಾಗಿತ್ತು. ಪೋಲಿಸರು ಪಂಚನಾಮೆ ಮಾಡಿ ಪೊಟೊ ತೆಗೆದಿರುತ್ತಾರೆ. ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯ್ತು. ಸಾಕ್ಷಿಗೆ ಸಿಡಿ ಸಮೇತ 3 ಪೊಟೊಗಳ ಪೈಕಿ ಒಂದರಲ್ಲಿ ತನ್ನನ್ನು ಮತ್ತು ಉಳಿದ ಪೊಟೊಗಳಲ್ಲಿ ಮೃತಳನ್ನು , ಪೋಲಿಸರನ್ನು ಮತ್ತು ಗುನ್ನಾ ಜಾಗವನ್ನು ನೋಡಿ ಗುರುತಿಸಿದ್ದರಿಂದ ಸದರಿ ಸಿಡಿಯನ್ನು ನಿಪಿ-2 ಎಂದು, ಪೊಟೊಗಳನ್ನು ನಿಪಿ-3 ರಿಂದ 5 ವರೆಗೆ ಗುರುತಿಸಲಾಯ್ತು. ಸದರಿ ಪಂಚನಾಮೆಯನ್ನು ಮದ್ಯಾಹ್ನ 1.00 ರಿಂದ 3.00 ವರೆಗೆ ಮಾಡಲಾಗಿದೆ. ಮೃತ ಅಜ್ಜಿಯ ಶವವು ಅವಳ ವಾಸದ ಮನೆಯಲ್ಲಿ ಇತ್ತು. ಸ್ಥಳದಲ್ಲಿ ಮೃತ ಅಜ್ಜಿಯ ಮಕ್ಕಳು ಇದ್ದರು. ಸದರಿಯವರೇ ಮೃತ ಅಜ್ಜಿಯ ಶವವನ್ನು ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ-3 ರಲ್ಲಿ ಮೃತಳ ಶವದ ಮೈಮೇಲೆ ಇದ್ದ ಸೀರೆಯನ್ನು ನೋಡಿ ಗುರುತಿಸುತ್ತಾರೆ.

**<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ</u>**

ಪೋಲಿಸರು ಮೃತಳ ಶವ ಪಂಚನಾಮೆ ಮಾಡಿದ್ದು, ಮೃತಳ ಕಣ್ಣುಗಳು , ಕೈಗಳು ಬಟ್ಟೆಗಳ ಕುರಿತು ಪರಿಶೀಲನೆ ಮಾಡಿರುತ್ತಾರೆ. ನಿಪಿ-1 ನ್ನು ತಯಾರಿಸಲು ನಾನು ಯಾವುದೇ ಮಾಹಿತಿಯನ್ನು ನೀಡಿಲ್ಲ. ನಿಪಿ-1 ರ ಮಾಹಿತಿ ಇಲ್ಲ. ಪೋಲಿಸರು ಹೇಳಿದಂತೆ ನಾನು ನಿಪಿ-1 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ-1 ರ ಕಾಲಕ್ಕೆ ಸಾವಿರಕ್ಕಿಂತಲೂ ಹೆಚ್ಚಿನ ಜನ ಸೇರಿದ್ದರು. ನಿಪಿ-1 ಕ್ಕೆ ನಾನು ಮಾತ್ರ ಸಹಿ ಮಾಡಿರುತ್ತೇನೆ. ಬೇರೆಯವರು ಸಹಿ ಮಾಡಿರುವುದಿಲ್ಲ. ಪೋಲಿಸರು ನನ್ನ ಸಮಕ್ಷಮ ಮೃತ ಅಜ್ಜಿಯ ಕಣ್ಣುಗಳನ್ನು ಬಿಚ್ಚಿಲ್ಲ. ಪೊಟೊ ತೆಗೆಯುವ ಕಾಲಕ್ಕೆ ಮೃತ ಅಜ್ಜಿಯ ಕಣ್ಣು ಮತ್ತು ಕೈಗಳನ್ನು ಕಟ್ಟಲಾಗಿತ್ತು. ನಾನು ಮೃತ ಅಜ್ಜಿಯ ಕಣ್ಣು ಮತ್ತು ಕೈಗಳನ್ನು ಕಟ್ಟಲಾಗಿತ್ತು ಎಂದು ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ಶವ ಪಂಚನಾಮೆಯ ಕಾಲಕ್ಕೆ ಪೊಟೊ ತೆಗೆಯುತ್ತಿದ್ದಾಗ ಮೃತ ಅಜ್ಜಿಯ ಮಕ್ಕಳು ಇದ್ದರು. ನಿಪಿ-3 ರಲ್ಲಿರುವ ಕಾಣಸಿಗುವ ನನ್ನ ಪಕ್ಕದಲ್ಲಿ ನಿಂತಿರುವ ಚೂಡಿದಾರ ಧರಿಸಿದ ಹೆಣ್ಣುಮಗಳು ಮೃತ ಅಜ್ಜಿಯ ಮಗಳಾಗಿರುತ್ತಾಳೆ. ಈ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮೃತ ಅಜ್ಜಿಗೆ ಗಾಯವಾದ ಬಗ್ಗೆ ಮತ್ತು ಸೀರೆಯಿಂದ ಮುಚ್ಚಿದ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ನಿಪಿ-3 ರಿಂದ 5 ಪೊಟೊಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ನಿಪಿ-3 ರಿಂದ 5 ಪೊಟೊಗಳನ್ನು ಯಾವ ದಿನಾಂಕದಂದು ತೆಗೆದಿರುತ್ತಾರೆಂದು ಈಗಹೇಳಲು ಆಗುವುದಿಲ್ಲ ಎಂದರೆ ಸರಿ. ನಾನು ಸಾಮಾಜಿಕ ಹೋರಾಟಗಾರ್ತಿ ಎಂದರೆ ಸರಿ. ನಾನು ಸಾಕಷ್ಟು ಬಾರಿ ಪೋಲಿಸ ಠಾಣೆಗೆ ಹೋಗಿ ಬಂದು ಮಾಡುತ್ತೇನೆ ಎಂದರೆ ಸರಿ. ನನಗೆ ಪೋಲಿಸರ ಪರಿಚಯವಿದ್ದು ಅವರ ವಿನಂತಿಯ ಮೇರೆಗೆ ನಿಪಿ-1 ಕ್ಕೆ ಸಹಿ ಮಾಡಿರುತ್ತೇನೆಂದರೆ ಸರಿ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ಎಫ್.ಟಿ.ಎಸ್.ಸಿ-1
ಹಾವೇರಿ.

PW- 01

CW-01

**ದಿನಾಂಕ: 17.02.2024 ರಂದು ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

1 ನೇ ಆರೋಪಿತನ ತಂದೆ ನನ್ನ ಸೋದರ ಮಾವನ ಮಗ ಎಂದರೆ ಸರಿ. ಆರೋಪಿತರ ಮನೆ ನನ್ನ ಹೆಣ್ಣುಅಜ್ಜಿಯ ಮನೆ ಎಂದರೆ ಸರಿ. 1 ನೇ ಆರೋಪಿಯು ತಂದೆ ತಾಯಿ ಮತ್ತು ತಮ್ಮನೊಂದಿಗೆ ವಾಸವಾಗಿರುತ್ತಾನೆ ಎಂದರೆ ಸರಿ. ಆರೋಪಿತರ ಮನೆಯ ನಮ್ಮ ಅಳಿಯ ಸಂಬಂಧಿಕರ ಮನೆಯಾಗಿದ್ದರಿಂದ ನಮ್ಮ ಮಗಳನ್ನು ಮದುವೆ ಮಾಡಿಕೊಟ್ಟಿದ್ದೇವೆ ಎಂದರೆ ಸಾಕ್ಷಿಯು ನಮ್ಮ ಮಗಳನ್ನು ಕೋರಿ ಆರೋಪಿತರು ಕೇಳಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಮಗಳನ್ನು ನಾವೇ ಮಗಳನ್ನು ಮದುವೆ ಮಾಡಿಕೊಡಬೇಕೆಂದು ಹಿರಿಯರು ನಿಶ್ಚಯ ಮಾಡಿದ್ದರು ಎಂದರೆ ಸರಿ. ನಾವು ಮತ್ತು ಆರೋಪಿತರು ವಧುವರರಿಗೆ ನಮ್ಮ ಸಂಪ್ರದಾಯದ ಪ್ರಕಾರ ವದುವರೋಪಚಾರ ಮಾಡಿದ್ದೆವು ಎಂದರೆ ಸರಿ. ಮದುವೆಯಾದ ನಂತರ ನನ್ನ ಮಗಳು ಆರೋಪಿತರ ಮನೆಗೆ ಹೋಗಿ ಬಾಳ್ವೆ ಮಾಡಿರುತ್ತಾಳೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಕಣ್ಣೀರಿನಲ್ಲಿ ಕೈ ತೊಳೆದಿರುತ್ತಾಳೆಂದು ನುಡಿಯುತ್ತಾರೆ. ಮದುವೆಯಾಗಿ ನನ್ನ ಮಗಳು ಆರೋಪಿತರ ಮನೆಗೆ ಹೋದಾಗ ನಾನು 4 – 5 ಬಾರಿ ಆರೋಪಿತರ ಮನೆಗೆ ಹೋಗಿದ್ದೆ. ನಾನು ಹೋದಾಗ 1 ನೇ ಆರೋಪಿಯು ನನ್ನ ಮಗಳೊಂದಿಗೆ ಅನ್ಯೋನ್ಯವಾಗಿದ್ದ ಎಂದರೆ ಸರಿಯಲ್ಲ. ನನ್ನ ಮಗಳು ಸಾಯುವ ಎರಡು ವರ್ಷದ ಮೊದಲು ನಿದ್ರೆ ಮಾತ್ರೆಗಳನ್ನು ಸೇವಿಸಿದ್ದಳು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಮಗಳನ್ನು ಆಸ್ಪತ್ರೆಗೆ ಆರೋಪಿತರು ದಾಖಲು ಮಾಡಿದ್ದು ನಾನು ಆಸ್ಪತ್ರೆಗೆ ಬಂದು ನನ್ನ ಮಗಳನ್ನು ನೋಡಿರುತ್ತೇನೆ ಎಂದರೆ ಸರಿ. ಆಸ್ಪತ್ರೆಯಿಂದ ಸ್ವಲ್ಪ ದಿನಗಳ ಕಾಲ ಇರಲಿ ಎಂದು ನಮ್ಮ ಮಗಳನ್ನು ನಮ್ಮ ಮನೆಗೆ ಕರೆದುಕೊಂಡು ಹೋಗಿದ್ದೆವು ಎಂದರೆ ಸರಿ. ನಂತರ ನಾನು ನನ್ನ ಮಗಳನ್ನು ಆರೋಪಿತರ ಮನೆಗೆ ಕಳುಹಿಸಿಕೊಡಲಿಲ್ಲ ಎಂದರೆ ಸರಿ. ನನ್ನ ಎರಡನೇ ಮಗಳನ್ನು ಗಂಡಿನ ಕಡೆಯವರು ನೋಡಲು ಬಂದಾಗ ಅಡಚಣೆಯಾಗುವುದೆಂದು ನನ್ನ ಮಗಳನ್ನು ಆರೋಪಿತರ ಮನೆಗೆ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮಗಳನ್ನು ನಾವು ನಮ್ಮ ಮನೆಗೆ ಕರೆದುಕೊಂಡು ಹೋದಾಗ ಸಾಕಷ್ಟು ಬಾರಿ ಕರೆಯಲು ಬಂದಿದ್ದರು ಎಂದರೆ ಸರಿಯಲ್ಲ. ನನ್ನ ಎರಡನೇ ಮಗಳ ಮದುವೆಯ ಅಡಚಣೆಗೋಸ್ಕರ ನಾವು ಮೃತ ನನ್ನ ಮಗಳನ್ನು ಆರೋಪಿತರ ಮನೆಯಲ್ಲಿ ಬಿಟ್ಟುಬಂದಿದ್ದೆವು ಎಂದರೆ ಸರಿಯಲ್ಲ. ನನ್ನ ಮೃತ ಮಗಳು ಆರೋಪಿತರ ಮನೆಗೆ ಬಂದಾಗ ಅಕ್ಕಿಆಲೂರಿನ ನಮ್ಮ ಸಮಾಜದ ಹಿರಿಯರೆಲ್ಲ ಸೇರಿ ಪಂಚಾಯತಿ ಮಾಡಿದ್ದರು

ಎಂದರೆ ಸರಿ. ಆ ಕಾಲಕ್ಕೆ ನಾವು ನಿಡಿ-1 ರಂತೆ ಬರೆದು ಸಹಿ ಮಾಡಿ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮೃತ ಮಗಳು ಆರೋಪಿತರ ಮನೆಗೆ ಬಂದ ಬಳಿಕ 1 ನೇ ಆರೋಪಿ ಮತ್ತು ನನ್ನ ಮಗಳು ಪ್ರತ್ಯೇಕವಾಗಿರಲು ಮನೆ ಮಹಡಿಯ ಮನೆಯಲ್ಲಿ ಪ್ರತ್ಯೇಕವಾಗಿದ್ದರು ಎಂದರೆ ಸರಿ. ನನ್ನ ಮಗಳು ಮತ್ತು 1 ನೇ ಆರೋಪಿಯು ಪ್ರತ್ಯೇಕವಾಗಿದ್ದಾಗ ಅನ್ಯೋನ್ಯತೆಯಿಂದ ಇದ್ದರು ಎಂದರೆ ಸರಿಯಲ್ಲ. (ಈ ಹಂತದಲ್ಲಿ ಸಾಕ್ಷಿಯ ಅಳುತ್ತಿದ್ದು, ಸಾವರಿಸಿಕೊಳ್ಳಲು ಸಮಯಾವಕಾಶ ನೀಡಿ, ಸಾಕ್ಷಿ ಬರೆದುಕೊಳ್ಳಲಾಯ್ತು.) ನನ್ನ ಮಗಳು ಮತ್ತು 1 ನೇ ಆರೋಪಿ ಪ್ರತ್ಯೇಕವಾಗಿದ್ದಾಗ ನಾನು ಬಂದು ಹೋಗಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಒಂದು ಬಾರಿ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮಗಳು ಸಾಯುವ ಮುನ್ನ ನಾನು ಯಾವ ದಿನಾಂಕದಂದು ಹೋಗಿರುತ್ತೇನೆಂದು ನನಗೆ ಹೇಳಲು ಆಗುವುದಿಲ್ಲ.

ನನ್ನ ಮಗಳು ತೀರಿಕೊಂಡ ವಿಷಯವನ್ನು ಪೋಲಿಸರು ತಿಳಿಸಿದ ಮೇರೆಗೆ ನಾವು ಅಕ್ಕಿಆಲೂರಿಗೆ ಸಂಜೆ 6.00 ಗಂಟೆಗೆ ಮನೆಗೆ ಬಂದಿರುತ್ತೇವೆ. ನಾವು ಬಂದ ನಂತರವೇ ಪೋಲಿಸರು ಮನೆಯ ಬಾಗಿಲನ್ನು ತೆರೆಸಿದರು ಎಂದರೆ ಸರಿಯಲ್ಲ. ನಾವು ಆರೋಪಿತರ ಮನೆಯಲ್ಲಿ ಅರ್ಧ ಗಂಟೆಯವರೆಗೆ ಇದ್ದೆ. ನನ್ನ ಮಗಳನ್ನು ಏಣಿ ಮೂಲಕ ಕೆಳಗೆ ಇಳಿಸಿರುತ್ತಾರೆ. ನನ್ನ ಮಗಳ ಕುತ್ತಿಗೆಗೆ ಅಸ್ಥಿರಜ್ಜು ಗುರುತು ಇತ್ತು ಎಂದರೆ ಸಾಕ್ಷಿಯು ನನಗೆ ದುಖವಾಗಿದ್ದರಿಂದ ನನ್ನ ಮಗಳನ್ನು ನೋಡಲಾಗಲಿಲ್ಲ ಎಂದು ನುಡಿಯುತ್ತಾರೆ. ಪೋಲಿಸರು,ತಾಲೂಕಾ ದಂಡಾಧಿಕಾರಿ ಮತ್ತು ಇತರರು ಸ್ಥಳದಲ್ಲಿದ್ದು ಕೈಗೊಳ್ಳಬೇಕಾದ ಕ್ರಮವನ್ನು ಕೈಗೊಂಡರು. ನನಗೆ ಓದು ಬರಹ ಗೊತ್ತಿಲ್ಲ ಆದರೆ ಸಹಿ ಮಾತ್ರ ಮಾಡುತ್ತೇನೆಂದು ನುಡಿಯುತ್ತಾರೆ. ಪೋಲಿಸರು ಮತ್ತು ತಾಲೂಕಾ ದಂಡಾಧಿಕಾರಿ ಕೆಲವು ದಾಖಲೆಗಳ ಮೇಲೆ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ನಿಪಿ-1, 2 ನ್ನು ತೋರಿಸಿ, ಸಹಿ ಮಾಡಿದ ದಾಖಲೆಗಳ ಬಗ್ಗೆ ವಿಷಯ ಗೊತ್ತಿಲ್ಲ ಎಂದರೆ ಸರಿ.

ನನ್ನ ಮೃತ ಮಗಳು ಮೊದಲಿನಿಂದಲೂ ಮಾನಸಿಕವಾಗಿ ಅಸ್ವಸ್ಥಳಿದ್ದಳು ಎಂದರೆ ಸರಿಯಲ್ಲ. ನನ್ನ ಮಗಳು ಸಾಯುವ ಮುನ್ನ ಚೀಟಿ ಬರೆದಿರುತ್ತಾಳೆ ಎಂದರ ಸರಿಯಲ್ಲ. ನನ್ನ ಮಗಳು ತನ್ನ ಸಾವಿಗೆ ಯಾರು ಕಾರಣರಲ್ಲ ಎಂದು ಕಾಗದ ಬರೆದಿದ್ದಳು ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-33 ನ್ನು ತೋರಿಸಿ ಪಂಚನಾಮೆಯ ಕಾಲಕ್ಕೆ ತಾಲೂಕಾ ದಂಡಾಧಿಕಾರಿಗಳು ಜಪ್ತಿ ಮಾಡಿಕೊಂಡ ದಾಖಲೆ ಎಂದರೆ ಸರಿಯಲ್ಲ. ನನ್ನ ಮಗಳ ಮದುವೆಯಾಗಿ 5 - 6 ವರ್ಷಗಳಾದರೂ ಸಹ ಮಕ್ಕಳಾಗಿರಲಿಲ್ಲ ಎಂದರೆ ಸರಿ. ಮಕ್ಕಳಾಗದಿದ್ದರಿಂದ ನನ್ನ ಮಗಳು ಕೊರಗುತ್ತಿದ್ದಳು ಎಂದರೆ ಸರಿಯಲ್ಲ. ನನ್ನ ಮಗಳು ಮಾನಸಿಕ ಅಸ್ವಸ್ಥಳಿದ್ದ ಮಕ್ಕಳಾಗದ್ದರಿಂದ ತಾನೇ ಆತ್ಮಹತ್ಯೆ ಮಾಡಿಕೊಂಡಿದ್ದಳು ಎಂದರೆ ಸರಿಯಲ್ಲ. ಆರೋಪಿತರು ನನ್ನ ಮಗಳ ಸಾವಿಗೆ ಕಾರಣರಲ್ಲ ಎಂದರೆ ಸರಿಯಲ್ಲ. ನನ್ನ ಮಗಳ ಮದುವೆಯ ಕಾಲಕ್ಕೆ ಯಾವುದೇ ವರದಕ್ಷಿಣೆಯ ಮಾತುಕತೆಯಾಗಿರಲಿಲ್ಲ ಎಂದರೆ ಸರಿಯಲ್ಲ. ನಾವು 1 ನೇ ಆರೋಪಿಗೆ ವರದಕ್ಷಿಣೆ

ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿತರು ಯಾವುದೇ ಅಪರಾಧ ಎಸಗಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರ ಮುಂದೆ ತಾಃ30.06.2020 ರಂದು ವಿಚಾರಣೆ ಮಾಡಿ, ಹೇಳಿಕೆ ನೀಡಿಲ್ಲ ಎಂದರೆ ಸರಿ. ತಾಃ 30.06.2020 ರಂದು ಪೋಲಿಸರ ಮುಂದೆ " ತಹಶೀಲ್ದಾರ ಸಾಹೇಬರ ಹಾನಗಲ್ಲ ರವರು ನನ್ನ ಮಗಳ ಶವದ ಇನ್ವೇಕ್ಷ್ಟ ಪಂಚನಾಮೆ ಕಾಲಕ್ಕೆ ಸ್ಥಳದಲ್ಲಿದ್ದ ದೊರೆತ ಡೆತ್ ನೋಟನ್ನು ಹಾಗೂ ಅವಳ ಕೈ ಬರಹ ಇರುವ ನೋಟ ಪುಸ್ತಕವನ್ನು ಹಾಗೂ ಘಟನೆಗೆ ಸಂಬಂಧಿಸಿದ ಇನ್ನಿತರ ವಸ್ತುಗಳನ್ನು ಜಪ್ತ ಮಾಡಿರುತ್ತಾರೆ. ಡೆತ್ ನೋಟ ಬಗ್ಗೆ ಅನುಮಾನವಿರುತ್ತದೆ. ಜಪ್ತಿ ಮಾಡಿದ ನೋಟ್ ಪುಸ್ತಕದಲ್ಲಿ ಶ್ಲೇಖಗಳನ್ನು ನನ್ನ ಮಗಳೇ ಬರೆದಿದ್ದು, ಅವು ನನ್ನ ಮಗಳ ಕೈ ಬರಹವಿರುತ್ತವೆ" ಸದರಿ ಹೇಳಿಕೆಯ ಭಾಗವನ್ನು ನಿಡಿ-2 ಎಂದು ಗುರುತಿಸಲಾಯ್ತು. ಆರೋಪಿತರೇ ನನ್ನ ಮಗಳ ಸಾವಿಗೆ ಕಾರಣರೆಂದು ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ಎಫ್.ಟಿ.ಎಸ್.ಸಿ-1
ಹಾವೇರಿ.